2262 (2998) ಶ್ರೀ ಅಶೋಕ್. ಆರ್ (ಉತ್ತರಹಳ್ಳಿ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನಲ್ಲಿರುವ ಟ್ರಾಫಿಕ್ ಪೋಲೀಸಿನವರು ಬೆಂಗಳೂರಿನ ಮಾಲಿನ್ಯದಿಂದಾಗಿ ಹಲವಾರು ಕಾಯಿಲೆಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇವರ ಆರೋಗ್ಯ ತಪಾಸಣೆ, ಶಸ್ತ್ರ ಚಿಕಿತ್ಸೆ ಇವುಗಳಿಗಾಗಿ ವಿಶೇಷ ಸವಲತ್ತನ್ನು ಏನಾದರೂ ನೀಡಲಾಗುತ್ತಿದೆಯೇ (ವಿವರ ನೀಡುವುದು);

ಇ) ಇವರ ಕೆಲಸದ ಅವಧಿ ಏನು ಸತತ ಎಷ್ಟು ಗಂಟೆಗಳ ಕಾಲ– ಇವರು ಕೆಲಸ ನಿರ್ವಹಿಸ ಬೇಕಾಗುತ್ತಿದೆ (ವಿವರ ನೀಡುವುದು);

ಈ) ಇವರ ವೇತನ ಇತರೆ ಸರ್ಕಾರಿ ನೌಕರರ ವೇನತಕ್ಕೂ ಏನಾದರೂ ವೇತನ ಶ್ರೇಣಿಯಲ್ಲಿ ವ್ಯತ್ಯಾಸವಿದೆಯೇ; ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) 2004ನೇ ಸಾಲಿನಲ್ಲಿ ಎಲ್ಲಾ ಸಂಚಾರ ಸಿಬ್ಬಂದಿಗಳಿಗೆ ವೈದ್ಯಕೀಯ ತಪಾಸಣೆ ಮಾಡಿಸಲಾಗಿದೆ, ಹಾಗೂ ಪ್ರತಿ ವರ್ಷವೂ ಸಹ ವೈದ್ಯಕೀಯ ತಪಾಸಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇಲಾಖಾವತಿಯಿಂದ ಸಂಚಾರ ಸಿಬ್ಬಂದಿಯವರಿಗೆ ಆರೋಗ್ಯ ಭಾಗ್ಯ ಯೋಜನೆಯನ್ನು ಸಹ ಜಾರಿಗೆ ತಂದಿದ್ದು ಇದರ ಸೌಲಭ್ಯವನ್ನು ಸಂಚಾರ ವಿಭಾಗದ ಎಲ್ಲಾ ಸಿಬ್ಬಂದಿ ವರ್ಗದವರು ಪಡೆಯುತ್ತಿದ್ದಾರೆ.

ಇ) ಒಂದು ದಿನಕ್ಕೆ 8 ಘಂಟೆಗಳು, ಆದರೂ ಅನೇಕ ಸಂದರ್ಭಗಳಲ್ಲಿ ಇವರು ಅದಕ್ಕಿಂತ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸುತ್ತಾರೆ.

ಈ) ಇಲ್ಲ.

2263 (2999) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪೊಲೀಸ್‌ನವರಿಗೆ ಬರುವ ವೇತನ ಹಾಗೂ ಇತರೆ ಸರ್ಕಾರಿ ನೌಕರರಿಗೆ ನೀಡುವ ವೇತನದಲ್ಲಿ ವ್ಯತ್ಯಾಸಗಳಿವೆಯೇ?

ಆ) ಪೊಲೀಸ್‌ನವರು ಸರ್ಕಾರದ ಯಾವ ವೇತನ ಶ್ರೇಣಿಯಲ್ಲಿ ಬರುತ್ತಾರೆ! ವಿವರ ನೀಡುವುದು?

ಇ) ಪೊಲೀಸ್‌ನವರ ಕೆಲಸದ ವೇಳೆ ಏನು ಹಾಗೂ ಇವರಿಗೆ ವಿಶೇಷ ಭತ್ಯೆಗಳೇನಾದರೂ ನೀಡಲಾಗುವುದೇ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು):

ಅ) ಇಲ್ಲ

ಆ) ಪೊಲೀಸ್ ಪೇದೆ ಹುದ್ದೆ ಗ್ರೂಪ್ 'ಸಿ' ವೃಂದದ ಪ್ರಾರಂಭಿಕ ವೇತನ ಶ್ರೇಣಿ ರೂ. 3000–5450ರಲ್ಲಿ ಬರುತ್ತಾರೆ (3000–75–3450–100–4450–125–5450)

24 ಗಂಟೆಗಳು

ಪೊಲೀಸ್ ಪೇದೆಗಳಿಗೆ ಈ ಕೆಳಕಂಡಂತೆ ವಿಶೇಷ ಭತ್ಯೆ ನೀಡಲಾಗುತ್ತಿದೆ.

1) ವಾರದ ಭತ್ಯೆ– ರೂ 50–00 (1 ದಿನಕ್ಕೆ)

2) ವಾಷಿಂಗ್ ಭತ್ಯೆ– ರೂ 50–00 (ಒಂದು ತಿಂಗಳಿಗೆ)

3) ಪತ್ರಾಂಕಿತ ರಜೆ ವೇತನದ ಬದಲಿಗೆ 30 ದಿನಗಳ ವೇತನ (ಒಂದು ವರ್ಷಕ್ಕೆ)

4) ವಿಧಾನಸೌಧದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಭದ್ರತಾ ಸಿಬ್ಬಂದಿಗಳಿಗೆ ಮತ್ತು ರಾಜ್ಯ ಗುಪ್ತ ವಾರ್ತೆ:ಸಿಓಡಿ:ಎಸ್.ಟಿ.ಎಫ್. ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗೆ ಮೂಲ ವೇತನದ ಮೇಲೆ ಶೇ 33 1/3 ರಷ್ಟು ವಿಶೇಷ ವೇತನ.

2264 (2481) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ):– ಮಾನ್ಯ ಪೌರಾಡಳಿತ ಮತ್ತು ಕೆ. ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ಪಟ್ಟಣದ ಒಳಚರಂಡಿ ಮಾಡುವ ಉದ್ದೇಶ ಸರ್ಕಾರದ ಪ್ರಸ್ತಾವನೆಯಲ್ಲಿದೆಯೆ;

ಆ) ಕಾಮಗಾರಿಯ ಅಂದಾಜು ವೆಚ್ಚ ಎಷ್ಟು;

ಇ) ಮಾಗಡಿ ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಮತ್ತು ಯಾವಾಗ ಪೂರ್ಣಗೊಳ್ಳುವುದು ವಿವರ ನೀಡುವುದು?

ಅ) ಹೌದು

ಆ) ರೂ. 996.00 ಲಕ್ಷಗಳು.

ಇ) ಮಾಗಡಿ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ರೂ. 996.00 ಲಕ್ಷಗಳ ಯೋಜನೆಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲನೆಯಲ್ಲಿದೆ.

2265 (2485) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ):– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ತಾಲ್ಲೂಕಿನ ತಿಪ್ಪಸಂದ್ರ ಹ್ಯಾಂಡ್ ಪೋಸ್ಟ್ ಮತ್ತು ಆಗಲಕೋಟೆ ಹ್ಯಾಂಡ್ ಪೋಸ್ಟ್‌ನಲ್ಲಿ ಪೋಲೀಸ್ ಚೌಕಿಯನ್ನು ಪ್ರಾರಂಭಿಸಲು ಅತ್ಯವಶ್ಯಕವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಸರ್ಕಾರ ಕೈಗೊಂಡಿರುವ ಕ್ರಮವೇನು, ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು):

ಅ) ಸರ್ಕಾರದ ಗಮನಕ್ಕೆ ಬಂದಿಲ್ಲ, ಪ್ರಸ್ತಾವನೆ ಬಂದಲ್ಲಿ ಸೂಕ್ತವಾಗಿ ಪರಿಶೀಲಿಸಲಾಗುವುದು.

ಆ) ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.